ಶ್ರೀ ಜಿ. ದುಗ್ಗಪ್ಪ.—ರೂ. 60,382-8-0 ಬಾಕಿ ಕೊಡಬೇಕೆಂದು ಹೇಳುತ್ತೀರಿ. ಎಷ್ಟು ವರ್ಷದಿಂದ ಈ ಬಾಕಿ ಇದೆ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಸುಮಾರು ಎರಡು ಮೂರು ವರ್ಷದಿಂದಲೂ ತೆಗೆದಿರತಕ್ಕ ಬಾವಿ ಕಾಂಗಾರಿಗಳಿಗೆ ಅಷ್ಟು ಹಣ ಕೊಡಬೇಕಾಗುತ್ತದೆ.

ಶ್ರೀ ಜಿ. ದುಗ್ಗಪ್ಪ.—ಎರಡು ಮೂರು ವರ್ಷದಿಂದಲೂ ಬಾಕಿ ಕೊಡಬೇಕಾದ ಹಣ 60,382-8-0 ಇದ್ದರೂ ಕಳೆದ ಸಾಲಿನ ಬಡ್ಜೆಟ್‌ನಲ್ಲಿ ಬರೀ 21,400 ರೂಪಾಯಿಗಳನ್ನು ಮಾತ್ರ ಅಲಾಟ್ ಮಾಡಿದ್ದೀರಿ ಅಲ್ಲವೇ ?

ಅಧ್ಯಕ್ಷರು.—ಅಲ್ಲೇ ಇದೆಯಲ್ಲಾ answer (*a*) ಯಲ್ಲಿ.

ಶ್ರೀ ಜಿ. ದುಗ್ಗಪ್ಪ.—ಇದರಿಂದ ತಾವು ಅದಕ್ಕೆ ಹೆಚ್ಚು ಗಮನಕೊಟ್ಟಿಲ್ಲ ಎಂದು ತಿಳಿದುಕೊಳ್ಳ ಬಹುದೇ ?

Sri T. CHANNIAH.—It is an inference.

ಶ್ರೀ ಜಿ. ದುಗ್ಗಪ್ಪ.—ಎಂದರೆ ತಾವು ಹಳ್ಳಿಗಾಡಿನ ಕುಡಿಯುವ ನೀರಿನ ಬಾವಿಗಳ ಅವಶ್ಯಕತೆಗೆ ಗಮನ ಕೊಡುವುದಿಲ್ಲ ಎಂದು ತಿಳಿದುಕೊಳ್ಳಬಹುದೇ ?

ಶ್ರೀ ಟಿ. ಚನ್ನಯ್ಯ.—ಹೆಚ್ಚು ಗಮನಕೊಟ್ಟೇ ಬಡ್ಜೆಟ್ಟಿನಲ್ಲಿ 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಅದರಲ್ಲಿ ಚಿತ್ರದುರ್ಗ ಜಿಲ್ಲೆಗೆ ಎಷ್ಟು ಅಲಾಟ್ ಮಾಡಿದ್ದೀರಿ, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಮಾಡಿಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಹೋದ ಸಾಲಿನಲ್ಲಿ ಇದಕ್ಕಾಗಿ ಎಷ್ಟು ಹಣ ಬಡ್ಜೆಟ್ಟಿನಲ್ಲಿ ಒದಗಿನ ಲಾಗಿತ್ತು ?

ಶ್ರೀ ಟಿ. ಚನ್ನಯ್ಯ.—ಕಳೆದ ವರ್ಷ ಎರಡು ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು.

ಶ್ರೀ ಬಿ. ಟಿ. ಕೆಂಪರಾಜ್.—ಎರಡು ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ನಹ 60,382 ರೂಪಾಯಿ ಬಾಕಿ ಇರಲಕ್ಕೆ ಕಾರಣವೇನು, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಹಣವಿಲ್ಲದೇ ಇದ್ದ ದೆಸೆಯಿಂದ ಕೊಡಲಕ್ಕೆ ಆಗಲಲ್ಲ.

ಶ್ರೀ ಬಿ. ಟಿ. ಕೆಂಪರಾಜ್.—ಹಳೆಯ ಬಾವಿಗಳನ್ನೇ ತೋರಿಸಿ ಹಣ ತೆಗೆದುಕೊಳ್ಳುತ್ತಾ ಇರುವುದು ನರ್ಕಾರದವರ ಗಮನಕ್ಕೆ ಬಂದಿದೆಯೇ ?

Mr. SPEAKER.—You may bring such cases to their notice. You need not make much of these general allegations.

L. F. Dispensaries.

Q.—883. Sri B. HUTCHE GOWDA (Turuvekere):—

Will the Government be pleased to state :—

(*a*) the number of L. F. Dispensaries in the State (districtwar figures may kindly be given) ;

(*b*) the number proposed to be sanctioned during 1954-55 (districtwar) ?

A.—Sri T. CHANNIAH (Minister for Public Health and Local Self-Government).—

(*a*) 345. Statement appended below.

(*b*) 18. Statement appended below.

Consolidated statement showing the L. F. Dispensaries existing as at the end of December 1953.

Sl. No.	*District*		*L. F. Dispensaries*
1	Bangalore	...	52
2	Chikmagalur	...	27
3	Chitaldrug	...	41
4	Hassan	...	33
5	Kolar	...	45
6	Mandya	...	27
7	Mysore	...	44
8	Shimoga	...	26
9	Tumkur	...	40
10	Bellary	...	10
	Total	...	345

Statement showing the number of L. F. Dispensaries proposed to be opened during 1954-55 (Districtwar).

Sl. No.	*District*		*L.F. Dispensaries*
1	Bangalore	...	2
2	Mysore	...	3
3	Hassan	...	1
4	Chikmagalur	...	2
5	Shimoga	...	1
6	Chitaldrug	...	4
7	Tumkur	...	4
8	Kolar	...	1
	Total	...	18

ಶ್ರೀ ಬಿ. ಹುಚ್ಚೇಗೌಡ.—ಈ ಆಸ್ಪತ್ರೆಗಳನ್ನು ಮಂಜೂರುಮಾಡಬೇಕಾದರೆ ಆಯಾ ಸ್ಥಳದ ಜನಸಂಖ್ಯೆ ಅಥವಾ ವಿಸ್ತೀರ್ಣದ ಮೇರೆ ಏನಾದರೂ ಒಂದು ನಿಷ್ಕರ್ಷೆ ಮಾಡಿಕೊಂಡು ಮಾಡುತ್ತೀರಾ ? ಇಲ್ಲ ಯಾರು ಯಾರು ಆಸ್ಪತ್ರೆ ಕೇಳುತ್ತಾರೋ ಅವರಿಗೆಲ್ಲಾ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ, ಅವಶ್ಯಕತೆ ಇದೆಯೇ ಇಲ್ಲವೇ ಎಂಬುದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಎಷ್ಟು ಮೈಲಿ ರೇಡಿಯಸ್‌ನಲ್ಲಿ ಆಸ್ಪತ್ರೆ ಇರಬೇಕೆಂಬುದನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಸಾಮಾನ್ಯವಾಗಿ 5 ಮೈಲಿ ರೇಡಿಯಸ್ ಇರಬೇಕೆಂದು ನಿಷ್ಕರ್ಷೆ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹೆಚ್ಚಾಗಿ ಅವಶ್ಯಕತೆ ಇದೆಯೇ ಎಂಬುದನ್ನೇ ಗಮನಕ್ಕೆ ತೆಗೆದುಕೊಳ್ಳಲಾಗುವುದು. ಕೆಲವು ಸಂದರ್ಭಗಳಲ್ಲಿ 5 ಮೈಲಿ ರೇಡಿಯಸ್ ಇರತಕ್ಕ ಸ್ಥಳಗಳಲ್ಲೂ ಕೂಡ ಆಸ್ಪತ್ರೆಗಳನ್ನು ಕೊಡಲಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಬಳ್ಳಾರಿ ಜಿಲ್ಲೆಯಲ್ಲಿ ಹತ್ತು ಆಸ್ಪತ್ರೆಗಳು ಮಾತ್ರ ಇವೆ. ಹೊಸದಾಗಿ ಕೊಡಬೇಕೆಂದಿರುವುದರಲ್ಲಿ ಏನೂ ತೋರಿಸಿಲ್ಲ ಕಾರಣ ಏನು, ಸ್ವಾಮಿ ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆ ಇದೆ ಎಂದು ರೆಪ್ರೆಸೆಂಟೇಷನ್ ಸರ್ಕಾರಕ್ಕೆ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಹೊಸದಾಗಿ 18 ಆಸ್ಪತ್ರೆಗಳನ್ನು ಕೊಡಬೇಕೆಂದಿರುವುದರಲ್ಲಿ ಬಳ್ಳಾರಿಗೆ ಒಂದೂ ತೋರಿಸಿಲ್ಲ, ಎಂದರೆ ಅಲ್ಲಿ ಅವಶ್ಯಕತೆ ಇಲ್ಲ ಎಂದೇ ?

ಶ್ರೀ ಕೆ. ಹನುಮಂತಯ್ಯ.—ಅವಶ್ಯಕತೆ ಇರುತ್ತದೆ ; ಸಾಧ್ಯವಾದರೆ ಕೊಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಮುಂದಿನ ವರ್ಷ ಬಳ್ಳಾರಿಗೆ ಕೊಡುವುದಿಲ್ಲ ಎಂದೇ ?

ಶ್ರೀ ಕೆ. ಹನುಮಂತಯ್ಯ.—ಅವಶ್ಯಕತೆ ಬಂದಲ್ಲಿ ಕೊಡಲಾಗುತ್ತದೆ ಎಂದು ಆಗಲೇ ಹೇಳಿದ್ದೇನೆ.

ಶ್ರೀ ಬಿ. ಹುಚ್ಚೇಗೌಡ.—ಕೆಲವು ಕಡೆ 2-3 ಮೈಲಿ ಫಾಸಲೆಗೆ ಒಂದೊಂದು ಆಸ್ಪತ್ರೆ ಇದೆ. ಕೆಲವು ಕಡೆ 25-30 ಮೈಲಿ ಫಾಸಲೆ ಇದ್ದರೂ ಒಂದು ಆಸ್ಪತ್ರೆಯೂ ಇಲ್ಲ. ಇದನ್ನು ನೋಡಿಕೊಂಡು ಒಂದು ಮ್ಯಾಪ್ ತಯಾರುಮಾಡಿ ಇಂಥಿಂಥಾ ಕಡೆ ಕೊಡಬೇಕೆಂದು ನಿರ್ದಿಷ್ಟವಾಗಿ ಏನಾದರೂ ಸ್ಕೀಂ ಇದೆಯೇ ಅಥವಾ ನಮ್ಮನೆ ಒತ್ತಾಯದ ಮೇಲೆ ಅವಶ್ಯಕತೆ ಇದೆ ಎಂಬ ಭಾವನೆ ಎಲ್ಲಿ ಬರುತ್ತದೆಯೋ ಅಲ್ಲಿಗೆ ಕೊಡುತ್ತೀರೋ ?

ಶ್ರೀ ಟಿ. ಚನ್ನಯ್ಯ.—ನಾನು ಆಗಲೇ ಹೇಳಿದ ಹಾಗೆ, ಅವಶ್ಯಕತೆ ಎಲ್ಲೆಲ್ಲಿ ಇದೆಯೋ ಅಲ್ಲೆಲ್ಲಾ ತೆಗೆಯುತ್ತೇವೆ.

Mr. SPEAKER.—In the second list, Local Fund Dispensaries which are proposed to be opened are mentioned ; Bellary is not found in that list, and not even one dispensary is given to Bellary. What do you say about it, is the question.

ಶ್ರೀ ಎಂ. ಚಿಕ್ಕಲಿಂಗಯ್ಯ.—ಮಳವಳ್ಳಿ ತಾಲ್ಲೂಕು ಊರಗಳ್ಳಿ ಗ್ರಾಮದಲ್ಲಿ ಆಸ್ಪತ್ರೆ ಕೊಡಬೇಕೆಂದು ಕೇಳಿ ಕೊಂಡಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ, ಊರಗಳ್ಳಿಯಿಂದ ಸರ್ಕಾರದವರಿಗೆ ಪ್ರಪೋಸಲ್ ಏನೂ ಬಂದಿಲ್ಲ,

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದ ಹತ್ತಿರ ಹೋಗಿ ಎಕ್ಸ್‌ಟೆರಿಮಾಡಿ ಎಲ್ಲಾ ವಿಚಾರಮಾಡಿದ್ದಾರೆ. ಈ ವರ್ಷವಾದರೂ ಅಲಾಟ್‌ಮಾಡುವುದಕ್ಕಾಗುತ್ತದೆಯೆ ?

ಶ್ರೀ ಟಿ. ಚನ್ನಯ್ಯ.—ಯೋಚಿಸುತ್ತೇನೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಮೈಸೂರು ಜಿಲ್ಲೆಯಲ್ಲಿ 3 ಡಿಸ್ಪೆನ್ಸರಿಗಳನ್ನು ಮಂಜೂರು ಮಾಡಬೇಕೆಂದಿರುವುದೆಲ್ಲಿ ?

ಶ್ರೀ ಟಿ. ಚನ್ನಯ್ಯ.—ಹುಂಡೀಪುರ, ಹಂಗಳ, ಗೌಡಗೆರೆ ಗ್ರಾಮಗಳಲ್ಲಿ.

Sri K. LAKKAPPA.—It is shown in the Appendix that one hospital is proposed to be started in Hassan District. May I know the place where you start the dispensary, Sir ?

ಶ್ರೀ ಟಿ. ಚನ್ನಯ್ಯ.—ದೊಡ್ಡಮೇಟಿಕುರ್ಕೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಲ್ಲಿ ಹೊಸದಾಗಿ ಆಸ್ಪತ್ರೆಗಳನ್ನು ಮಂಜೂರು ಮಾಡಬೇಕೆಂದಿದೆ ?

ಶ್ರೀ ಟಿ. ಚನ್ನಯ್ಯ.—ಸೊಲ್ಲಾಪುರ ಮತ್ತು ಶಿವನಿ.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರು ಜಿಲ್ಲೆಯಲ್ಲಿ ಡಿಸ್ಪೆನ್ಸರಿ ತೆರೆಯುವ ಸ್ಥಳಗಳು ಯಾವುವು ?

ಶ್ರೀ ಟಿ. ಚನ್ನಯ್ಯ.—ನುಗ್ಗನಹಳ್ಳಿ ಮತ್ತು ಸೋಗಾಲ್.

Mr. SPEAKER.—If you have got the list, you may read the names of all these 18 places.

ಶ್ರೀ ಟಿ. ಚನ್ನಯ್ಯ.—1954-55ನೆಯ ಸಾಲಿನಲ್ಲಿ ಏರ್ಪಡಿಸಬೇಕೆಂದು ಉದ್ದೇಶಿಸಿರುವ ಲೋಕಲ್ ಫಂಡ್ ಡಿಸ್ಪೆನ್ಸರಿಗಳು ಸ್ಥಾಪಿಸಲ್ಪಡುವ ಸ್ಥಳಗಳು ಇವು.

ಬೆಂಗಳೂರು ಡಿಸ್ಟ್ರಿಕ್ಟ್.—(1) ನುಗ್ಗನಹಳ್ಳಿ (2) ಸೋಗಾಲ್.

ಮೈಸೂರು ಡಿಸ್ಟ್ರಿಕ್ಟ್.—ಹುಂಡೀಪುರ, ಹಂಗಳ, ಗೌಡಗೆರೆ (ಪೆಟ್ಟಿನರ್ಟಿ ಆಸ್ಪತ್ರೆ),

ಹಾಸನ ಡಿಸ್ಟ್ರಿಕ್ಟ್.— ದೊಡ್ಡಮೇಟಿಕುರ್ಕೆ. (ಪೆಟರ್ನಿಟಿ ಆಸ್ಪತ್ರೆ).

ಚಿಕ್ಕಮಗಳೂರು ಡಿಸ್ಟ್ರಿಕ್ಟ್.—ಸೊಲ್ಲಾಪುರ, ಶಿವನಿ.

ಶಿವಮೊಗ್ಗ ಡಿಸ್ಟ್ರಿಕ್ಟ್.— ತಾವರೆಕೆರೆ.

ಚಿತ್ರದುರ್ಗ ಡಿಸ್ಟ್ರಿಕ್ಟ್.—ಹಡದಿ, ಮಲ್ಲಾಡಿಹಳ್ಳಿ, ಕುಣಿಕೆರೆ (ಎತ್ತಿನ ಏರಯ್ಯನ ಕೋಟೆ), ಚಿಕ್ಕಗೊಂಡನ ಹಳ್ಳಿ.

ತುಮಕೂರು ಡಿಸ್ಟ್ರಿಕ್ಟ್.—ತೋವಿನಕೆರೆ, ಬಿಳಿಗೆರೆ, ಬಾಣಸಂದ್ರ, ಪಟ್ಟನಾಯಕನಹಳ್ಳಿ.

ಕೋಲಾರ ಡಿಸ್ಟ್ರಿಕ್ಟ್.— ಟ್ಯಾಕಲ್.

ಶ್ರೀ ಕೊಟ್ರ ಬಸವನಗೌಡ.—ಬಳ್ಳಾರಿ ಜಿಲ್ಲೆಗೂ ಸಹ ಇತರ ಜಿಲ್ಲೆಗಳಿಗೆ ಕೊಡುವಹಾಗೆ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಬಳ್ಳಾರಿ ಜಿಲ್ಲೆಯಿಂದ ಆಸ್ಪತ್ರೆ ತೆರೆಯಬೇಕೆಂದು ಪ್ರಪೋಸಲ್ ಬಂದಿಲ್ಲ ; ಬಂದರೆ ಯೋಚನೆಮಾಡುತ್ತೇವೆ.

ಶ್ರೀ ಎಸ್. ಪರಮೇಶ್ವರಪ್ಪ.—ಬಳ್ಳಾರಿ ಜಿಲ್ಲೆಯಲ್ಲಿ 20 ಸಾವಿರ, 30 ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆಯಿದೆ. ಅಲ್ಲಿ 28 ಫಿರ್ಕಾಗಳಿವೆ. ಫಿರ್ಕಾಕ್ಕೆ ಒಂದು ಆಸ್ಪತ್ರೆಯನ್ನಾದರೂ ಮಾಡುತ್ತೀರಾ ?

(ಉತ್ತರವಿಲ್ಲ.)

ಶ್ರೀ ಆರ್. ಅನಂತರಾಮ್.—ಯಾವ ನೀತಿಯ ಮೇರೆ ಆಸ್ಪತ್ರೆಗಳನ್ನು ಕೊಡುತ್ತೀರಿ ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆಯ ಮೇಲೆ ಎಂದು ಆಗಲೇ ಉತ್ತರ ಹೇಳಿದೆ.

ಶ್ರೀ ಆರ್. ಅನಂತರಾಮ್.—ಸಣ್ಣ ಪ್ರದೇಶಗಳಿಗೆ ಕೊಡಕೂಡದೆಂಬ ನಿರ್ದಿಷ್ಟ ನೀತಿಯಿದೆಯೆ ?

ಶ್ರೀ ಟಿ. ಚನ್ನಯ್ಯ.—ಹಾಗೇನೂ ಇಲ್ಲ.

ಶ್ರೀ ಆರ್. ಅನಂತರಾಮ್.— ಬೆಂಗಳೂರಿನಲ್ಲಿ ಬಹಳ ಹಿಂದುಳಿದ ಪ್ರದೇಶವಾದ ಗುಟ್ಟಹಳ್ಳಿಗೆ ಒಂದು ಆಸ್ಪತ್ರೆ ಕೊಡಬೇಕೆಂದು ಹೋದನಲ ಒಂದು ಖೋತಾ ನೂಚನೆಯನ್ನು ತಂದು ಹೇಳಿರಲಲ್ಲವೆ ?

ಶ್ರೀ ಟಿ. ಚನ್ನಯ್ಯ.—ಬೆಂಗಳೂರಿನಲ್ಲಿ ಬೇಕಾದಷ್ಟು ಆಸ್ಪತ್ರೆಗಳಿವೆ. ಗುಟ್ಟಹಳ್ಳಿಗೆ ಆಸ್ಪತ್ರೆ ಬೇಕೆಂದು ಸರ್ಕಾರಕ್ಕೆ ಮನವಿಯೇನೂ ಬಂದಿಲ್ಲ. ಪ್ಯಾಲೇಸ್ ಗುಟ್ಟಹಳ್ಳಿಯಲ್ಲಿ ಒಂದು ಹೆರಿಗೆ ಆಸ್ಪತ್ರೆಯಿದೆ.

ಶ್ರೀ ಆರ್. ಅನಂತರಾಮ್.—ನಾನು ಕೇಳುವುದು ಗೌರಿಪುರದ ಗುಟ್ಟಹಳ್ಳಿಗೆ. ಅದು ಕಡೆಯ ಪ್ರದೇಶ.

ಶ್ರೀ ಟಿ. ಚನ್ನಯ್ಯ.—ಪ್ರಪೋಸಲ್ ಬಂದರೆ ಯೋಚನೆಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಸರ್ಕಾರಿ ಆಸ್ಪತ್ರೆಗಳ ಸಂಖ್ಯೆ ಈಗ ಯಾವ ರೀತಿಯಿದೆಯೆಂದು ಹೇಳುತ್ತೀರಾ ?

ಶ್ರೀ ಟಿ ಚನ್ನಯ್ಯ.—ಒಟ್ಟು 345 ಲೋಕಲ್ ಫಂಡ್ ಡಿಸ್ಪೆನ್ಸರಿಗಳಿವೆಯೆಂದು ಉತ್ತರದಲ್ಲೇ ಹೇಳಿದೆ.

ಶ್ರೀ ಎಸ್. ಗೋಪಾಲಗೌಡ.—ಅದಲ್ಲದೆ ಬೇರೆ ಸರ್ಕಾರಿ ಆಸ್ಪತ್ರೆಗಳಿಷ್ಟಿವೆಯೆಂದು ನಾನು ಕೇಳುವುದು.

ಅಧ್ಯಕ್ಷರು.—500ರಲ್ಲಿ 345 ಕಳೆದರೆ ಎಷ್ಟೋ ಉಳಿಯುತ್ತೆ.

ಶ್ರೀ ಎಸ್. ಗೋಪಾಲಗೌಡ.—ಬೆಂಗಳೂರಿನಲ್ಲಿ 52 ಲೋಕಲ್ ಫಂಡ್ ಡಿಸ್ಪೆನ್ಸರಿಗಳಿರುವುದಲ್ಲದೆ ಇನ್ನೂ ಬೇರೆ ಬೇರೆ ಆಸ್ಪತ್ರೆಗಳು ಹೆಚ್ಚಾಗಿವೆಯಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ ಜಿಲ್ಲೆ ಮಲೆನಾಡು ಜಿಲ್ಲೆಯಲ್ಲವೆ ?

Mr. SPEAKER.—It is understood.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ 26 ಆಸ್ಪತ್ರೆಗಳು ಮಾತ್ರವಿರುವುದನ್ನು ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಅದು ಬಹಳ ಕಡಮೆಯಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ಈಗಿರುವ ಆಸ್ಪತ್ರೆಗಳ ಜೊತೆಗೆ ಶಿವಮೊಗ್ಗ ಜಿಲ್ಲೆಯಲ್ಲಿ 14 ಹೆಲ್ತ್ ಯೂನಿಟ್ಟುಗಳು ಸಹ ಇವೆ. ಅವೂ ಕೂಡ ಆಸ್ಪತ್ರೆಗಳಿಗೆ ಲಗತ್ತಾಗಿವೆ. ಅದಲ್ಲದೆ ಬೇರೆ 28 ಹೆಲ್ತ್ ಯೂನಿಟ್ಟುಗಳನ್ನು ಕೂಡ ಶಿವಮೊಗ್ಗ ಜಿಲ್ಲೆಯಲ್ಲಿ ಪ್ರಾರಂಭಮಾಡಿದೆ.

ಶ್ರೀ ಎಸ್. ಗೋಪಾಲಗೌಡ.—ಈ ಹೆಲ್ತ್ ಯೂನಿಟ್ಟುಗಳಲ್ಲಿ ಡಾಕ್ಟರುಗಳಿರುತ್ತಾರೆಯೆ ?

ಶ್ರೀ ಟಿ. ಚನ್ನಯ್ಯ.—ಇರುತ್ತಾರೆ.

ಶ್ರೀ ಎಸ್. ಗೋಪಾಲ ಗೌಡ.—ಆಸ್ಪತ್ರೆಗಳು ಬೇಕೆಂದು ಕಳೆದ 3-4 ವರ್ಷಗಳಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಯಾವ ಯಾವ ಪ್ರದೇಶಗಳಿಂದ ಬೇಡಿಕೆ ಬಂದಿದೆ, ಸ್ವಾಮಿ ?

Sri T. CHANNIAH.—That information is not readily available.

ಶ್ರೀ ಎಸ್. ಗೋಪಾಲ ಗೌಡ.—ತೀರ್ಥಹಳ್ಳಿಯಲ್ಲಿ ಆಸ್ಪತ್ರೆಗಾಗಿ ಒಂದು ಕಟ್ಟಡ ಕಟ್ಟಿ ಮೂರು ವರ್ಷಗಳಾದವಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಗೋಪಾಲ ಗೌಡ.—ಅಲ್ಲಿ ಆಸ್ಪತ್ರೆಯನ್ನು ಯಾಪಾಗ ತೆರೆಯುವುದು ?

ಶ್ರೀ ಟಿ. ಚನ್ನಯ್ಯ.—ಬಹುತಃ ಬರುವ ತಿಂಗಳಲ್ಲಿ ಎಂದು ಕಾಣುತ್ತದೆ.

ಶ್ರೀ ಎಸ್. ಗೋಪಾಲ ಗೌಡ.—ತೀರ್ಥಹಳ್ಳಿ ತಾಲ್ಲೂಕು ಅರಗ ಮತ್ತು ಕೋಣಂದೂರಿನ ಗ್ರಾಮಸ್ಥರು ಆಸ್ಪತ್ರೆ ಬೇಕೆಂದು ಸರ್ಕಾರಕ್ಕೆ ಅರ್ಜಿ ಹಾಕಿದ್ದಾರೆಯೆ ?

ಶ್ರೀ ಟಿ. ಚನ್ನಯ್ಯ.—ಹಾಕಿದ್ದಾರೆ.

ಶ್ರೀ ಎಸ್. ಗೋಪಾಲ ಗೌಡ.—ಮಲೆನಾಡು ಪ್ರದೇಶಗಳಲ್ಲಿ ಇನ್ನೂ ಹೆಚ್ಚಾಗಿ ಆಸ್ಪತ್ರೆಗಳನ್ನು ತೆರೆಯಲು ಸರ್ಕಾರದವರು ಪ್ರಯತ್ನ ಮಾಡುವರೆ ?

ಶ್ರೀ ಟಿ. ಚನ್ನಯ್ಯ.—ಈಗಾಗಲೇ ಸಾಕಾದಷ್ಟು ಆಸ್ಪತ್ರೆಗಳನ್ನು ತೆರೆದಿದ್ದೇವೆ ; ಈಗ ಅವಶ್ಯಕತೆಯಿಲ್ಲ.

ಶ್ರೀ ಎಸ್. ಗೋಪಾಲ ಗೌಡ.—ಅವಶ್ಯಕತೆಯಿಲ್ಲವೆಂದು ಯಾವ ಆಧಾರದ ಮೇಲೆ ಸರ್ಕಾರ ತೀರ್ಮಾನಕ್ಕೆ ಬಂದಿದೆ ? ಅವಶ್ಯಕತೆಯಿಲ್ಲವೆಂದರೆ ಬಹಳ ಅನ್ಯಾಯವಾಗುತ್ತದೆ. It is highly unjust.

Sri K. HANUMANTHAIYA.—It is highly unjust to refuse taxes; therefore, you cannot ask for more hospitals. (*Laughter.*)

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈಗ ನಮ್ಮ ಜಿಲ್ಲೆಗೆ ಕೊಟ್ಟಿರುವ ಎರಡು ಆಸ್ಪತ್ರೆಗಳೂ ಒಂದೇ ತಾಲ್ಲೂಕಿಗೆ ಸೇರಿವೆಯಲ್ಲವೆ ?

ಅಧ್ಯಕ್ಷರು.—ಹೌದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಎರಡೂ ಅಲ್ಲೇ ಆಗಬೇಕೆಂದು ಜಿಲ್ಲಾ ಬೋರ್ಡು ನಿರ್ಣಯ ಮಾಡಿ ಕಳುಹಿಸಿದೆಯೆ ?

ಶ್ರೀ ಟಿ. ಚನ್ನಯ್ಯ—ಹೌದು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಈಗ ಅಭೂತಪೂರ್ವ ಮೂಲೆಯಾದ ಮಲ್ಲೇನಹಳ್ಳಿ ಆಸ್ಪತ್ರೆ ವಿಚಾರ ವೇನಾಯಿತು ?

ಶ್ರೀ ಟಿ. ಚನ್ನಯ್ಯ.—ಅದನ್ನು ಮಂಜೂರುಮಾಡಿದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹೆಸರುಘಟ್ಟಕ್ಕೆ ಆಸ್ಪತ್ರೆ ಕೊಡುತ್ತೇವೆಂದು ವಾಗ್ದಾನಮಾಡಿದ್ದುದು ಏನಾಯಿತು ?

ಶ್ರೀ ಟಿ. ಚನ್ನಯ್ಯ.—ಅದನ್ನು ಮಾಡುವುದಕ್ಕೆ ಪ್ರಪೋಸಲ್ ಬಂದಿಲ್ಲ, ಬಂದ ಮೇಲೆ ಯೋಚನೆ ಮಾಡುತ್ತೇವೆ.

ಶ್ರೀ ಬಿ. ವಿ. ನಾರಾಯಣ ರೆಡ್ಡಿ.—ಕೋಲಾರ ಜಿಲ್ಲೆಯಲ್ಲಿ ಹೆಲ್ತ್ ಯೂನಿಟ್ಟುಗಳಿವೆಯೆ ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಬಿ. ವಿ. ನಾರಾಯಣ ರೆಡ್ಡಿ.—ಮೊನ್ನೆ ತಾನೆ ಹೆಲ್ತ್ ಆಫೀಸರು ಅಲ್ಲಿಗೆ ಬಂದು ಮಲೇರಿಯ ವಿಪರೀತವಾಗಿದೆಯೆಂದು ಸರ್ಕಾರಕ್ಕೆ ವರದಿ ಕಳುಹಿಸಿಲ್ಲವೆ ?

ಶ್ರೀ ಟಿ. ಚನ್ನಯ್ಯ.—ವರದಿ ಬಂದರೆ ಯೋಚನೆ ಮಾಡುತ್ತೇವೆ.

Sri B. V. NARAYANA REDDY.—In view of your having got the report, are you proposing to open health centres in Kolar District ?

Sri T. CHANNIAH.—It will be considered, Sir.

12-30 P.M.

ಶ್ರೀ ಆರ್. ಮುನಿಸ್ವಾಮಯ್ಯ.—ದೇವನಹಳ್ಳಿ ತಾಲ್ಲೂಕು ತುಪ್ಪದಗಿರಿಯಲ್ಲಿಯೂ ಒಂದು ಲೋಕಲ್ ಫಂಡ್ ಡಿಸ್ಪೆನ್ಸರಿ ಕೊಡುವುದಾಗಿ ವಾಗ್ದಾನಮಾಡಿರಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಆ ಉಪಪ್ರಶ್ನೆ ಇದಕ್ಕೆ ಸಂಬಂಧಪಟ್ಟಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.— ಶಿವಮೊಗ್ಗ ಜಿಲ್ಲೆಯಲ್ಲಿ ಹಲವಾರು ಲೋಕಲ್ ಫಂಡ್ ಡಿಸ್ಪೆನ್ಸರಿಗಳಲ್ಲಿ ಡಾಕ್ಟರುಗಳಿಲ್ಲವೆಂಬುದನ್ನು ಒಪ್ಪಿಕೊಂಡಿದ್ದೀರಿ. ಹಾಗಿದ್ದರೆ ಹೊಸದಾಗಿ ತೆರೆಯಬೇಕೆಂದಿರುವ ಲೋಕಲ್ ಫಂಡ್ ಡಿಸ್ಪೆನ್ಸರಿಗಳಿಗೆ ಎಲ್ಲಿಂದ ಡಾಕ್ಟರುಗಳನ್ನು ಒದಗಿಸುತ್ತೀರಿ ?

Mr. SPEAKER.—They have answered on previous occasions. They have definitely said that vacancies would be advertised and applications would be called for. But the Hon'ble Member is repeating the same question.

Plant Protection Work, Agricultural Department.

Q.—939. **Sri K. V. BYRE GOWDA** (Bangalore North).—

Will the Government be pleased to state :—

(*a*) the amount that they have spent on plant protection in the Agricultural Department from 1st April 1953 :

(*b*) the protection work they have conducted during each month of the year commencing from 1st April 1953 ;

(*c*) the amount spent on this work each month from 1st April 1953 ?

A.—**Dr. R. NAGAN GOWDA** (Minister for Agriculture).—

(*a*) Rs. 41,833-14-1 up to the end of December 1953 during 1953-54.

(*b*) and (*c*) Statement appended.